# ಮಾಸ ಭವಿಷ್ಯ

**ಅಕ್ಟೋಬರ್** 2020

## ಮೇಷ




ವಿಶ್ರಾಂತಿ, ಪ್ರೀತಿ, ಪ್ರವಾಸಕ್ಕೆ ಪ್ರಶಸ್ತವಾದ ಸಮಯ. ಉಳಿತಾಯ ಮಾಡಿ, ಜೊತೆಗೆ ಸ್ವಂತದ ಚಿಕ್ಕಪುಟ್ಟ ಕನಸುಗಳಿಗೂ ಒಂದಷ್ಟು ಆದ್ಯತೆ ನೀಡಿ. ಸ್ವಂತದ ಖುಷಿಗಾಗಿ ಹಣ ವ್ಯಯಿಸುವುದರಲ್ಲಿ ತಪ್ಪಿಲ್ಲ.

**ಶುಭ:** 11, 15, 21, 22, 28

**ಅಶುಭ:** 9, 14, 16, 20, 30

## ಕರ್ಕಾಟಕ



ಸ್ಥಿರ ಮತ್ತು ಶಾಶ್ವತ ಭಾವನಾತ್ಮಕ ಸಂಬಂಧ ಬೆಸೆಯುವ ಅವಕಾಶಗಳು ಎದುರಾಗಲಿವೆ. ಧನಸ್ಸು, ಕನ್ಯಾ ಮತ್ತು ಮಿಥುನ ರಾಶಿಯವರು ಮುಂಬರುವ ದಿನಗಳಲ್ಲಿ ನಿಮ್ಮ ಜೀವನದಲ್ಲಿ ಮಹತ್ವದ ಪಾತ್ರ ವಹಿಸಲಿದ್ದಾರೆ.

**ಶುಭ:** 12, 19, 23, 25, 28

**ಅಶುಭ:** 11, 18, 21, 29, 30

## ವೃಷಭ




ಆರೋಗ್ಯ ವ್ಯತ್ಯಾಸಗಳನ್ನು ಕಡೆಗಣಿಸಬೇಡಿ. ಚಿಕ್ಕಪುಟ್ಟ ತೊಂದರೆಗಳು ಕಂಡರೂ ಕೂಡಲೇ ವೈದ್ಯರನ್ನು ಭೇಟಿ ಮಾಡಿ. ತಿಂಗಳ ಎರಡನೇ ವಾರದಲ್ಲಿ ಕಚೇರಿಯಲ್ಲಿ ನಡೆಯುವ ಘಟನೆಗಳಿಂದ ವಿಚಲಿತರಾಗುವಿರಿ. ತಾಳ್ಮೆ ಇರಲಿ.

**ಶುಭ:** 15, 19, 22, 24, 30

**ಅಶುಭ:** 10, 14, 18, 25, 28

## ಸಿಂಹ



ವೃತ್ತಿಪರ ವಿಷಯಗಳಿಗೆ ಹೆಚ್ಚು ಗಮನ ನೀಡಬೇಕಾಗುವುದು. ನಿಮ್ಮ ಜೀವನದಲ್ಲಿ ಏನಿದೆ, ಏನಿಲ್ಲ ಎಂಬುದನ್ನು ವಿಶ್ಲೇಷಿಸಿ. ನಿಮ್ಮ ಆಲೋಚನೆಗಳನ್ನು ಕಾರ್ಯಗತಗೊಳಿಸಲು ಸೂಕ್ತ ಸಮಯಕ್ಕಾಗಿ ಕಾಯಬೇಕು.

**ಶುಭ:** 6, 17, 21, 25, 30

**ಅಶುಭ:** 7, 9, 16, 26, 27

## ಮಿಥುನ



ಅನಿರೀಕ್ಷಿತ ಅತಿಥಿಯ ಆಗಮನದಿಂದ ಸಂತಸ. ಶೀಘ್ರದಲ್ಲೇ ನಿಮ್ಮ ಜೀವನದಲ್ಲಿ ಅನೇಕ ಬದಲಾವಣೆಗಳು ಸಂಭವಿಸಲಿವೆ. ಅದಕ್ಕಾಗಿ ಸಿದ್ಧರಾಗಿ. ಹಿರಿಯ ಮಹಿಳೆಯೊಬ್ಬರು ನೀಡುವ ಅಮೂಲ್ಯ ಸಲಹೆಗಳಿಂದ ಅನುಕೂಲ.

**ಶುಭ:** 5, 12, 16, 18, 21

**ಅಶುಭ:** 10, 11, 17, 25, 28

## ಕನ್ಯಾ



ತಿಂಗಳ ಆರಂಭದಲ್ಲಿ ಪ್ರಯಾಣ ಮತ್ತು ವಿಶ್ರಾಂತಿಗಾಗಿ ಹಂಬಲಿಸುವಿರಿ. ಹಿಂದಿನ ವಿಚಾರಗಳು ಈಗ ನಿರೀಕ್ಷಿತ ಫಲಿತಾಂಶ ತರಲಿವೆ. ನಿಮ್ಮ ಆರೋಗ್ಯದ ಬಗ್ಗೆ ಯೋಚಿಸಿ, ಕ್ರೀಡೆಗಳಲ್ಲಿ ಭಾಗಿಯಾಗಿ.

**ಶುಭ:** 2, 12, 16, 24, 26

**ಅಶುಭ:** 3, 6, 10, 11, 25